

ರಣಥಂಬೋರ್‌ನಲ್ಲಿ ಕ್ಯಾಮೆರಾಗೆ ಸೆರೆ ಸಿಕ್ಕಾಗ...

# ಹುಲಿಗಳ ಸಂರಕ್ಷಣೆ ಹೇಗೆ?

**ಅರಣ್ಯದ ವ್ಯಾಪ್ತಿ ಕುಗ್ಗುತ್ತಿರುವುದು ಹುಲಿಗಳ ಸಂರಕ್ಷಣೆಗೆ ಬಹುದೊಡ್ಡ ಅಡ್ಡಿ. ಜತೆಗೆ ಪ್ರಾಣಿಗಳ ಕುರಿತು ಪ್ರವಾಸಿಗರ ಅವಜ್ಞೆಯೂ ಹೆಚ್ಚುತ್ತಿದೆ. ಮಾನವನ ಅರಣ್ಯ ಅತಿಕ್ರಮಣ ಬಹುದೊಡ್ಡ ಸಮಸ್ಯೆ.**

**ಚಿತ್ರ- ಲೇಖನ: ಜಿ.ಎಸ್. ಕೃಷ್ಣಮೂರ್ತಿ**

ಭಾರತದಲ್ಲಿ ಬಹಳ ಹಿಂದಿನಿಂದಲೂ ಮನುಷ್ಯನಿಗೆ ಪ್ರಾಣಿ, ಪಕ್ಷಿಗಳೊಂದಿಗೆ ಅವಿನಾಭಾವ ಸಂಬಂಧವಿದೆ. ಪ್ರಾಣಿ ಪಕ್ಷಿಗಳ ಜೊತೆ ತನಗಿರುವ ಸಂಬಂಧವನ್ನು ಪ್ರಾಚೀನ ಕಾಲದಿಂದಲೂ ಮನುಷ್ಯ ಚಿತ್ರಗಳ ಮೂಲಕ ಬಿಂಬಿಸಿದ್ದಾನೆ. ನಮ್ಮ ಪರಂಪರೆ ಪ್ರಕೃತಿಯೊಂದಿಗೆ ಬದುಕುವುದನ್ನು ತಿಳಿಸಿದೆ. ಇದಕ್ಕೆ ಪ್ರಕೃತಿ ಆರಾಧನೆ ಒಂದು ಉತ್ತಮ ಉದಾಹರಣೆ. ನಮ್ಮ ಧಾರ್ಮಿಕ ಕಟ್ಟುಪಾಡುಗಳು ಹೇಗೆ ವನ್ಯಜೀವಿ ಹಾಗೂ ಪ್ರಕೃತಿಯನ್ನು ಉಳಿಸುವಲ್ಲಿ ಸಫಲವಾಗಿದೆ ಎಂಬುದು ಆಶ್ಚರ್ಯದ ಸಂಗತಿ. ನಮ್ಮ ಹಿರಿಯರು ಜೀವಜಾಲದ ಬಗ್ಗೆ ಕೂಲಂಕಷವಾದ ತಿಳಿವಳಿಕೆ ಹೊಂದಿದ್ದರು. ಪ್ರತಿ ಪ್ರಾಣಿ, ಪಕ್ಷಿಯನ್ನು ಉಳಿಸಿ ಬೆಳೆಸಲು ಅವನ್ನು ದೇವ– ದೇವತೆಗಳೊಂದಿಗೆ ಗುರುತಿಸುವುದು ಒಂದು ಉತ್ತಮ ಮಾರ್ಗೋಪಾಯ.

ಹುಲಿಗಳನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಸಾಕಷ್ಟು ಛಾಯಾಚಿತ್ರಗಳನ್ನು ತೆಗೆದಿದ್ದೇನೆ. ಹಿಂದೆ ಕಾಡಿನ ರಾಜ 'ಸಿಂಹ' ಎಂಬ ಮಾತಿತ್ತು. ಈಗ ಹುಲಿಯನ್ನು ಭಾರತ